ದಿನಾಂಕಃ **13.07.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಎಂ.ಟಿ.ಆರ್.ವಕೀಲರಿಂದ ಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ನಾನೇ ಖುದ್ದು ನನ್ನ ವಕೀಲರಿಗೆ ಹೇಳಿ ತಯಾರು ಮಾಡಿಸಿರುತ್ತೇನೆ. ಅದರಲ್ಲಿರುವ ಎಲ್ಲ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

1. ಸರ್ವೇ ನಂ–209 ರ ಒಂದು ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು ಅದನ್ನು **ನಿಪಿ–11** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ.ಎಸ್.ವಕೀಲರಿಂದ ಃ**

01. ವಾದಿ ಚೆನ್ನಪ್ಪರವರಿಗೆ ನನ್ನ ತಂಗಿಯಾದ ಪುಟ್ಟಮ್ಮರವರನ್ನು ಕೊಟ್ಟು ಮದುವೆ ಮಾಡಿರುತ್ತೇವೆ ಎಂದರೆ ಸರಿ. ಸರ್ವೇ ನಂ–209 ರ ಒಟ್ಟು ವಿಸ್ತೀರ್ಣ 2 ಎಕರೆ 4 ಗುಂಟೆ ಜಮೀನು ಜೊತೆಗೆ 20 ಗುಂಟೆ ಖರಾಬು ಇರುತ್ತದೆ. ಸರ್ವೇ ನಂ–209 ರಲ್ಲಿ 1980 ರಲ್ಲಿ ವಿಭಾಗ ಮಾಡಿಕೊಳ್ಳುವ ಸಮಯದಲ್ಲಿ ವಾದಿ ಚೆನ್ನಪ್ಪರವರಿಗೆ 1 ಎಕರೆ 2 ಗುಂಟೆ ಜಮೀನು ಬಂದಿತ್ತು ಎಂದು ತಿಳಿಸಿದ್ದು, ನಾನು ವಿಭಾಗ ಪತ್ರವನ್ನು ನೋಡಿರುತ್ತೇನೆ. ಸರ್ವೇ ನಂ–209 ರಲ್ಲಿ 2 ಎಕರೆ 4 ಗುಂಟೆ ಜಮೀನಿನ ಪೈಕಿ ಪ್ರತಿವಾದಿಗೆ ಸೇರಿದ 1 ಎಕರೆ 2 ಗುಂಟೆ ಜಮೀನು ಸಂಪೂರ್ಣವಾಗಿ ಮತ್ತು ವಾದಿಗೆ ಸೇರಿರುವ 6 ಗುಂಟೆ ಜಮೀನು ನಾಲೆಗೆಂದು ಭೂ ಸ್ವಾಧೀನವಾಗಿರುತ್ತದೆ. ಈ ಸಂಬಂದ ಆರ್.ಟಿ.ಸಿ.ಯಲ್ಲಿ ನಮೂದಾಗಿರುವ ಬಗ್ಗೆ ನಾನು ನೊಡಿರುತ್ತೇನೆ. ಕಾಲುವೆಗಾಗಿ 2 ಎಕರೆ 4 ಗುಂಟೆ ಪೈಕಿ 1 ಎಕರೆ 28 ಗುಂಟೆ ಭೂ ಸ್ವಾಧೀನವಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೇ ನಂಬರ್ ನಲ್ಲಿ ಭೂ ಸ್ವಾಧೀನವಾಗಿ ಉಳಿದ ವಿಸ್ತೀರ್ಣ ಕೇವಲ 16 ಗುಂಟೆ ಎಂದರೆ ಸರಿಯಲ್ಲ.

02. ನಾನು ಅದೇ ಸರ್ವೇ ನಂಬರ್ ನಲ್ಲಿ 3 ಗುಂಟೆ ಜಮೀನನ್ನು ಖರೀದಿಸಿದ್ದು, ನನ್ನ ಸ್ವತ್ತಿನ ಚೆಕ್ಕುಬಂದಿ ಪೂಃ ಚೆನ್ನಪ್ಪರವರ ಜಮೀನು, ಪಃ ಹಳ್ಳ, ಉಃ ಚೆನ್ನಪ್ಪರವರ ಜಮೀನು, ದಃ ರಸ್ತೆ ಇದೆ. ಪ್ರಸ್ತುತ ದಾವೆಯ ದಾವಾ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸರ್ವೇ ನಂ–209 ರಲ್ಲಿ 1 ಎಕರೆ 28 ಗುಂಟೆ ಜಮೀನು ಭೂ ಸ್ವಾದೀನವಾದ ಸಮಯದಲ್ಲಿ ಬಂದ ಪರಿಹಾರದ ಹಣವನ್ನು ವಾದಿ ಮತ್ತು ಪ್ರತಿವಾದಿ ಇಬ್ಬರು ಸಮನಾಗಿ ಹಂಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಭೂ ಸ್ವಾದೀನವಾಗಿ ಉಳಿದ 16 ಗುಂಟೆ ಜಮೀನಿನ ಪೈಕಿ ಮೂರು ಗುಂಟೆ ಜಮೀನನ್ನು ನಾನು ಖರೀದಿ ಮಾಡಿದ ನಂತರ ಉಳಿದ 13 ಗುಂಟೆ ಜಮೀನನ್ನು ವಾದಿ ಮತ್ತು ಪ್ರತಿ ತಲಾ 6.5 ಗುಂಟೆಯಂತೆ ಸಮನಾಗಿ ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲ ವಿಚಾರ ಗೊತ್ತಿದ್ದರು ಸಹ ವಾದಿ ನನ್ನ ಸಂಬಂಧಿಕನಾಗಿರುವ ಕಾರಣ ಆತನಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**